ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.1249/2023

| | | |
|---|---|---|
| ಸಾಕ್ಷಿಯ ಹೆಸರು | : ಮಂಜಪ್ಪ.ಕೆ. | ಸಿ.ಡಬ್ಲ್ಯು 6 |
| ತಂದೆಯ ಹೆಸರು | : ಕೆಂಚಪ್ಪ | ಪಿ.ಡಬ್ಲ್ಯು 5 |
| ವಯಸ್ಸು | : 46 ವರ್ಷ | |
| ಉದ್ಯೋಗ | : ಮುಖ್ಯ ಪೋಲೀಸ್ ಪೇದೆ | |
| ವಾಸ ಸ್ಥಳ | : ತರೀಕೆರೆ | |

ದಿನಾಂಕಃ11.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು ಕಳೆದ 3 ವರ್ಷಗಳಿಂದ ತರೀಕೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೋಲೀಸ್ ಪೇದೆಯೆಂದು ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 10.06.2023 ರಂದು ಚಾಸ-1 ರವರು ಹಾಜರು ಪಡಿಸಿದ ವರದಿಯ ಅನ್ವಯ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ಆರೋಪಿಗೆ ಕಲಂ.41 ರ ಅಡಿಯಲ್ಲಿ ನೋಟೀಸು ಜಾರಿ ಮಾಡಿ ಕಳುಹಿಸಲಾಯಿತು. ಜಪ್ತಿ ಪಂಚನಾಮೆಗೆ ಅನುಗುಣವಾಗಿ ನಾನು ಪಿ.ಎಫ್.ವರದಿಯನ್ನು ಸಲ್ಲಿಸಿದ್ದೇನೆ. ಪ್ರ.ವ.ವರದಿಯನ್ನು ನಿಪಿ-7 ಎಂದು ಗುರುತಿಸಲಾಯಿತು. ದೂರಿನ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ನನಗೆ ಚಾಸ-1 ರವರು ಯಾವುದೇ ವರದಿಯನ್ನು ಕೊಟ್ಟಿಲ್ಲ, ನನ್ನ ಮುಂದೆ ಆರೋಪಿ ಅಥವಾ ಮುದ್ದೆ ಮಾಲನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ವರದಿಗೆ ಅನುಗುಣವಾಗಿ ಸುಳ್ಳು ಪ್ರ.ವ.ವರದಿಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.